ಕಿರು ಸುದ್ದಿ

ಅಪರಿಚಿತ ವ್ಯಕ್ತಿ ಸಾವು

ಮಂಗಳೂರು: ಚಿಕಿತ್ಸೆಗೆಂದು ನಗರದ ವೆನ್ಲಾಕ್ ಆಸ್ಪತ್ರೆಗೆ ದಾಖಲಾಗಿದ್ದ ಸುಮಾರು 65 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯೊಬ್ಬರು ನ.5ರಂದು ಮೃತಪಟ್ಟಿದ್ದು, ಮೃತದೇಹವನ್ನು ವೆನ್ಲಾಕ್ ಶವಾಗಾರದಲ್ಲಿ ಇರಿಸಲಾಗಿದೆ.

ಮೃತವ್ಯಕ್ತಿಯು ಸುಮಾರು 5 ಅಡಿ ಎತ್ತರವಿದ್ದು, ಸಾಧಾರಣ ಶರೀರ, ಎಣ್ಣೆಕಪ್ಪು ಮೈ ಬಣ್ಣ ಹೊಂದಿದ್ದಾರೆ. ಮೃತರು ಕಪ್ಪು ತೋಳಿನ ಬಿಳಿ ಬಣ್ಣದ ಚೌಕುಳಿಯ ತುಂಬು ತೋಳಿನ ಶರ್ಟ್ ಹಾಗೂ ಲುಂಗಿ ಧರಿಸಿರುತ್ತಾರೆ. ಮೃತರ ಹೊಟ್ಟೆಯ ಬಲಕ್ಕೆ ಕಪ್ಪು ಮಚ್ಚೆ ಇದ್ದು, ವಾರೀಸುದಾರರಿದ್ದಲ್ಲಿ 0824-2220518 ಸಂಖ್ಯೆಯನ್ನು ಸಂಪರ್ಕಿಸುವಂತೆ ಪೊಲೀಸರು ತಿಳಿಸಿದ್ದಾರೆ.

ಮೃತದೇಹ ಪತ್ತೆ

ಮಂಗಳೂರು: ನಗರದ ಕಾರುಪಾರ್ಕಿಂಗ್ ಪಕ್ಕದ ಫುಟ್‌ಪಾತ್‌ನಲ್ಲಿ ನ.5ರಂದು ಸುಮಾರು 55 ವರ್ಷ ವಯಸ್ಸಿನ ಅಪರಿಚಿತ ವ್ಯಕ್ತಿಯ ಮೃತದೇಹ ಪತ್ತೆಯಾಗಿದೆ. ಸುಮಾರು 5 ಅಡಿ 7 ಇಂಚು ಎತ್ತರವಿರುವ ವ್ಯಕ್ತಿಯು ಸಪೂರ ಶರೀರ ಹಾಗೂ ಕಪ್ಪು ಬಣ್ಣ ಹೊಂದಿದ್ದು, ನೀಲಿ ಬಿಳಿ ಮತ್ತು ಹಳದಿ ಬಣ್ಣದ ಟೀ ಶರ್ಟ್ ಧರಿಸಿರುತ್ತಾರೆ. ಮೃತದೇಹವನ್ನು ವೆನ್ಲಾಕ್ ಶವಾಗಾರದಲ್ಲಿ ಇರಿಸಲಾಗಿದೆ. ಮೃತರ ವಾರಿಸುದಾರರಿದ್ದಲ್ಲಿ 0824-2220518 ಸಂಖ್ಯೆಯನ್ನು ಸಂಪರ್ಕಿಸುವಂತೆ ಮಂಗಳೂರು ದಕ್ಷಿಣ ಠಾಣಾ ಪೊಲೀಸರು ಮನವಿ ಮಾಡಿದ್ದಾರೆ.

ನೇಣಿನಲ್ಲಿ ಯುವಕನ ಶವ ಪತ್ತೆ ; ಕೊಲೆ ಶಂಕೆ

ಗಂಗೊಳ್ಳಿ: ಇಲ್ಲಿನ ಮ್ಯಾಂಗನೀಸ್ ವಾರ್ಫ್‌ನ ಬೋಟ್ ಬಿಲ್ಡಿಂಗ್ ಯಾರ್ಡ್ ಸಮೀಪ ಯುವಕನ ಶವ ನೇಣು ಬಿಗಿದ ಸ್ಥಿತಿಯಲ್ಲಿ ಸೋಮವಾರ ಬೆಳಿಗ್ಗೆ ಪತ್ತೆಯಾಗಿದೆ.

ಕುಂಭಾಶಿ ಗ್ರಾಮದ ಕೊರವಡಿ ನಿವಾಸಿ ಉಮೇಶ ಮೊಗವೀರ (32) ಮೃತಪಟ್ಟ ದುರ್ದೈವಿ.

ಗಂಗೊಳ್ಳಿಯ ಮ್ಯಾಂಗನೀಸ್ ರಸ್ತೆಯ ಬೋಟು ಕಟ್ಟುವ ಸ್ಥಳದಲ್ಲಿ ಕುತ್ತಿಗೆಗೆ ರೋಪಿನಿಂದ ನೇಣು ಬಿಗಿದ ಸ್ಥಿತಿಯಲ್ಲಿ ಈತನ ಮೃತದೇಹ ಪತ್ತೆಯಾಗಿದೆ. ಈತ ಕಳೆದ ಸುಮಾರು ಒಂದು ವರ್ಷಗಳಿಂದ ಶರಣ್ಯ ಎಂಬ ಬೋಟಿನಲ್ಲಿ ಚಾಲಕ ವೃತ್ತಿ ಮಾಡಿಕೊಂಡಿದ್ದ. ನೇಣು ಬಿಗಿದ ಸ್ಥಿತಿ ಅನುಮಾನಕ್ಕೆ ಎಡೆ ಮಾಡಿರುವುದರಿಂದ ಕುಟುಂಬಸ್ಥರು ಈತನ ಸಾವಿನ ಬಗ್ಗೆ ಸಂಶಯ ವ್ಯಕ್ತಪಡಿಸಿದ್ದಾರೆ. ಈತನನ್ನು ಕೊಲೆ ಮಾಡಿ ನೇಣು ಹಾಕಿರಬಹುದೆಂಬ ಶಂಕೆ ವ್ಯಕ್ತವಾಗಿದೆ. ಮರಣೋತ್ತರ ಪರೀಕ್ಷೆಗಾಗಿ ಮಣಿಪಾಲದ ಕೆಎಂಸಿ ಆಸ್ಪತ್ರೆಗೆ ಮೃತದೇಹ ಕಳುಹಿಸಲಾಗಿದೆ.

ಬೈಂದೂರು ಪೊಲೀಸ್ ವೃತ್ತನಿರೀಕ್ಷಕ ಪರಮೇಶ್ವರ ಗುಣಗಿ ಹಾಗೂ ಗಂಗೊಳ್ಳಿ ಪೊಲೀಸ್ ಉಪನಿರೀಕ್ಷಕ ಬಿ.ಸುಬ್ಬಣ್ಣ ಘಟನಾ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿದ್ದಾರೆ.

ಪೊಲೀಸರ ಯಶಸ್ವಿ ಕಾರ್ಯಾಚರಣೆ | ಆಯುಧಗಳು, ವಾಹನ ವಶ

ದರೋಡೆ ಸಂಚು : ಎಂಟು ವ್ಯಕ್ತಿಗಳ ಬಂಧನ

ದಿಗಂತ ವರದಿ: ಸೋಮವಾರಪೇಟೆ, ನ. 6

ರಾಜ್ಯ ಹೆದ್ದಾರಿಯಲ್ಲಿ ದರೋಡೆಗೆ ಮಾರಕಾಸ್ತ್ರಗಳ ಸಿದ್ದತೆಯೊಂದಿಗೆ ಹೊಂಚು ಹಾಕುತ್ತಿದ್ದ ತಂಡವನ್ನು ಬಂಧಿಸುವಲ್ಲಿ ಪಟ್ಟಣದ ಪೊಲೀಸ್ ತಂಡ ಯಶಸ್ವಿಯಾಗಿದೆ.

ತಂಡದಲ್ಲಿದ್ದ 12 ಮಂದಿ ಆರೋಪಿಗಳಲ್ಲಿ 8 ಮಂದಿಯನ್ನು ಬಂಧಿಸಿದ್ದಾರೆ. ಸುಂಠಿಕೊಪ್ಪ ಸಮೀಪದ ಮಳ್ಳೂರು ಗ್ರಾಮದವರಾದ ಕೆ.ಆರ್.ಅಭಿನಾಶ್ (27), ಎಂ.ಎನ್.ಚರಣ್ (24), ಟಿ.ಎಸ್.ಸಚಿನ್ (19), ಪಿ.ಸಿ.ಸುಜಿ (20), ಸೋಮವಾರಪೇಟೆ ಸಮೀಪದ ಯಡವಾರೆ ಗ್ರಾಮದ ಬಿ.ಎಚ್.ಯೋಗೇಶ್ (22), ಹೊಸತೋಟ ಗ್ರಾಮದ ಟಿ.ಆರ್.ರಾಜೇಶ್ (22), ಜಂಬೂರುಬಾಣೆ ಗ್ರಾಮದ ಕೆ.ಅನಿಲ್ (24), ಕುಶಾಲನಗರ ಬೈಚನಳ್ಳಿಯ ಎಚ್.ಕೆ.ಸಮೀರ್ (28) ಬಂಧಿತ ಆರೋಪಿಗಳು.

ಐಗೂರು ಗ್ರಾಮದವರಾದ ಭರತ್, ದರ್ಶನ್, ಯಡವಾರೆ ಗ್ರಾಮದ ಸುದೀಪ್, ಹೊಸತೋಟ ಗ್ರಾಮದ ಶರತ್ ತಲೆಮರೆಸಿಕೊಂಡಿದ್ದಾರೆ.

ಖಚಿತ ವರ್ತಮಾನದ ಮೇರೆಗೆ ಇಲ್ಲಿನ ಠಾಣೆಯ ಸಬ್‌ಇನ್ಸ್‌ಪೆಕ್ಟರ್ ಶಿವಣ್ಣ ನೇತೃತ್ವದ ತಂಡ ಭಾನುವಾರ ಮಧ್ಯರಾತ್ರಿ ಮಡಿಕೇರಿ ಮಾದಾಪುರ, ಸೋಮವಾರಪೇಟೆ ರಾಜ್ಯ ಹೆದ್ದಾರಿಯ ಕೋವರ್ ಕೊಲ್ಲಿ ಜಂಕ್ಷನ್ ಬಳಿ ತೆರಳಿದಾಗ, ಪಜೇರೋ ಮತ್ತು ಮಾರುತಿ ಆಲ್ಟೋ ವಾಹನಗಳು ನಿಂತಿರುವುದನ್ನು ಗಮನಿಸಿದ ಪೊಲೀಸ್ ತಂಡ ಆರೋಪಿಗಳ ಬಂಧನಕ್ಕೆ ಮುಂದಾಗಿದೆ. ಪಜೇರೋ ದಲ್ಲಿದ್ದ ಆರೋಪಿಗಳು ತಪ್ಪಿಸಿಕೊಂಡು ವಾಹನದಲ್ಲಿ ಕುಶಾಲನಗರ ರಸ್ತೆ ಮಾರ್ಗದಲ್ಲಿ ಪರಾರಿಯಾದರೆ, ಆಲ್ಟೋ ಕಾರಿನಲ್ಲಿದ್ದವರು ಪಕ್ಕದ ಕಾಫಿ ತೋಟಕ್ಕೆ ಜಿಗಿದು ಪರಾರಿಯಾಗಿದ್ದಾರೆ. ಕೂಡಲೆ ಕಾರ್ಯಪ್ರವೃತ್ತರಾದ ಪೊಲೀಸರು, ಕುಶಾಲನಗರ ಸೇರಿದಂತೆ ಜಿಲ್ಲೆಯ ಎಲ್ಲಾ ಠಾಣೆಗಳಿಗೆ ಮಾಹಿತಿ ನೀಡಿದ್ದಾರೆ. ಕುಶಾಲನಗರ ಸಮೀಪ ಪಜೇರೋ ವಾಹನದಲ್ಲಿದ್ದ 8 ಆರೋಪಿಗಳನ್ನು ಬಂಧಿಸಿದ್ದಾರೆ. ವಾಹನದಲ್ಲಿದ್ದ ಒಂದು ಲಾಂಗ್, 28 ಬಾಟಲ್‌ಗಳು, 5 ಕಬ್ಬಿಣದ ರಾಡು, 2 ಸ್ಟೀಲ್‌ರಾಡು, 1 ಹಾಕಿಸ್ಟಿಕ್, ಮರದ ರೀಪರ್ ತುಂಡು ಹಾಗೂ ಎರಡು ವಾಹನಗಳನ್ನು ವಶಪಡಿಸಿಕೊಳ್ಳಲಾಗಿದೆ.

ಡಿವೈಎಸ್‌ಪಿ ಸಂಪತ್ ಕುಮಾರ್, ವೃತ್ತನಿರೀಕ್ಷಕ ನಂಜುಡೇಗೌಡ, ಠಾಣಾಧಿಕಾರಿ ಶಿವಣ್ಣ ನೇತೃತ್ವದಲ್ಲಿ ಆರೋಪಿಗಳ ವಿಚಾರಣೆ ನಡೆದು, ದರೋಡೆ ಸಿದ್ದತೆಯೊಂದಿಗೆ ಹೊಂಚು ಹಾಕುತ್ತಿದ್ದ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. 8 ಆರೋಪಿಗಳನ್ನು ಮಡಿಕೇರಿ ನ್ಯಾಯಾಲಯಕ್ಕೆ ಹಾಜಪಡಿಸಲಾಗಿ, ನ್ಯಾಯಾಧೀಶರು 15 ದಿನಗಳ ಕಾಲ ನ್ಯಾಯಾಂಗ ಬಂಧನ ವಿಧಿಸಿದ್ದಾರೆ. ತಲೆಮರೆಸಿಕೊಂಡಿರುವ ಆರೋಪಿಗಳಿಗೆ ಪೊಲೀಸರು ಬಲೆ ಬೀಸಿದ್ದಾರೆ. ಕಾರ್ಯಾಚರಣೆಯಲ್ಲಿ ಸಿಬ್ಬಂದಿಗಳಾದ ಜಗದೀಶ್, ಮಹೇಂದ್ರ, ವಸಂತ್, ಸಂದೇಶ್, ಶಿವಕುಮಾರ್ ಭಾಗವಹಿಸಿದ್ದರು.

ಜಾರ್ಜ್ ರಾಜೀನಾಮೆಗೆ ಆಗ್ರಹಿಸಿ ಉಪವಾಸ ಸತ್ಯಾಗ್ರಹ

ದಿಗಂತ ವರದಿ: ವೀರಾಜಪೇಟೆ, ನ. 6

ದಕ್ಷ ಅಧಿಕಾರಿ ಡಿವೈಎಸ್‌ಪಿ ಗಣಪತಿ ಅವರ ಆತ್ಮಹತ್ಯೆಗೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಸಿಬಿಐ ತನಿಖೆಗೆ ಆದೇಶಿಸಿದ್ದು, ಮೊದಲ ಆರೋಪಿ ಸ್ಥಾನದಲ್ಲಿರುವ ಸಚಿವ ಜಾರ್ಜ್ ಅವರು ತಮ್ಮ ಸ್ಥಾನಕ್ಕೆ ಕೂಡಲೇ ರಾಜೀನಾಮೆ ನೀಡಬೇಕೆಂದು ಆಗ್ರಹಿಸಿ ಜನತಾದಳ ಪಕ್ಷದ ಕಾರ್ಯಕರ್ತರು ವೀರಾಜಪೇಟೆಯಲ್ಲಿರುವ ಯೋಧರ ಸ್ಮಾರಕದ ಅಹೋರಾತ್ರಿ ಉಪವಾಸ ಸತ್ಯಾಗ್ರಹ ನಡೆಸಿದರು.

ಉಪವಾಸ ಸತ್ಯಾಗ್ರಹದ ನೇತೃತ್ವವಹಿಸಿದ್ದ ಜೆ.ಡಿ.ಎಸ್. ಜಿಲ್ಲಾ ಸಮಿತಿ ಅಧ್ಯಕ್ಷ ಮೇರಿಯಂಡ ಸಂಕೇತ್ ಪೂವಯ್ಯ ಅವರು ಪತ್ರಕರ್ತರೊಂದಿಗೆ ಮಾತನಾಡಿ, ರಾಜ್ಯ ಸರ್ಕಾರದ ಮುಖವಾಡ ಕಳಚಿಬಿದ್ದಿದೆ. ಡಿವೈಎಸ್‌ಪಿ ಗಣಪತಿ ಅವರ ಆತ್ಮಹತ್ಯೆಗೆ ಸಂಬಂಧಿಸಿದಂತೆ ಈ ಹಿಂದೆ ಸಿಐಡಿ ತನಿಖೆ ನಡೆಸಿದಾಗ ಜಾರ್ಜ್ ಅವರು ರಾಜೀನಾಮೆ ನೀಡಿದ್ದರು. ಆದರೆ ಈಗ ಸಿಬಿಐ ತನಿಖೆ ನಡೆಸುತ್ತಿದ್ದರೂ, ಸಚಿವ ಜಾರ್ಜ್ ಹಾಗೂ ಇನ್ನಿಬ್ಬರು ರಾಜೀನಾಮೆ ನೀಡದಿರುವುದರಿಂದ ಮೊದಲ ಹಂತವಾಗಿ ಸೋಮವಾರ ಹಗಲು ಮತ್ತು ರಾತ್ರಿ (24 ಗಂಟೆಗಳ) ಉಪವಾಸ ಸತ್ಯಾಗ್ರಹ ಹಮ್ಮಿಕೊಂಡಿರುವುದಾಗಿ ತಿಳಿಸಿದರು.

ಗಣಪತಿ ಅವರ ಕುಟುಂಬಕ್ಕೆ ನ್ಯಾಯ ದೊರಕುವವರೆಗೂ ಹೋರಾಟ ನಡೆಸಲಾಗುವುದು. ಎಲ್ಲಾ ಇಲಾಖೆಗಳಿಗಿಂತ ಪೊಲೀಸ್ ಇಲಾಖೆಗೆ 24 ಗಂಟೆಯೂ ಕೆಲಸದ ಒತ್ತಡವಿರುವುದರಿಂದ ಪೊಲೀಸರಿಗೆ ಅನ್ಯಾಯವಾದಲ್ಲಿ ಸಮಾಜ ಅವರ ಜೊತೆ ಇರಬೇಕಾಗಿದೆ ಎಂದ ಸಂಕೇತ್ ಪೂವಯ್ಯ, ಕೊಡಗಿನಲ್ಲಿ ಕಾಡಾನೆ ದಾಳಿಗೆ ಕಾರ್ಮಿಕರು ಸೇರಿದಂತೆ ಅನೇಕರು ಮೃತಪಟ್ಟರೂ ಅರಣ್ಯ ಸಚಿವರು ಗಮನಹರಿಸಿಲ್ಲ, ಕಾಡಾನೆಗಳ ದಾಳಿಗೆ ಸರ್ಕಾರ ವೈಜ್ಞಾನಿಕವಾಗಿ ಕಂದಕಗಳನ್ನು ನಿರ್ಮಿಸಿ ಕ್ರಮ ಕೈಗೊಳ್ಳಬೇಕು. ಹಾಗೂ ದಿಡ್ಡಳ್ಳಿ ನಿರಾಶಿತರಿಗೆ ಅನ್ಯಾಯವಾದಾಗ ಮತ್ತು ಡಿವೈಎಸ್‌ಪಿ ಗಣಪತಿ ಅವರ ಆತ್ಮಹತ್ಯೆ ಸಂದರ್ಭ ಹಗಲೂ ರಾತ್ರಿ ಎನ್ನದೆ ಪ್ರತಿಭಟನೆ ನಡೆಸಿದಾಗಲೂ ರಾಜ್ಯದ ಮುಖ್ಯಮಂತ್ರಿ ಇತ್ತ ತಿರುಗಿ ನೋಡಿಲ್ಲ, ರಾಜ್ಯ ಸರ್ಕಾರ ಕೊಡಗು ಜಿಲ್ಲೆಯನ್ನು ಕಡೆಗಣಿಸಿದೆ ಎಂದು ಆರೋಪಿಸಿದರು.

ಉಪವಾಸ ಸತ್ಯಾಗ್ರಹದಲ್ಲಿ ವೀರಾಜಪೇಟೆ ವಿಧಾನಸಭಾ ಕ್ಷೇತ್ರ ಅಧ್ಯಕ್ಷ ಎಸ್.ಹೆಚ್.ಮತೀನ್, ರಾಜ್ಯ ಸಮಿತಿ ಸದಸ್ಯ ಮನ್ಸೂರ್ ಆಲಿ, ನಗರ ಸಮಿತಿ ಅಧ್ಯಕ್ಷ ಪಿ.ಎ.ಮಂಜುನಾಥ್, ಜೆ.ಡಿ.ಎಸ್.ಪಕ್ಷದ ವಲಯ ಅಧ್ಯಕ್ಷ ಅಮ್ಮಂಡ ವಿವೇಕ್, ಮಾತಂಡ ಚಂಗಪ್ಪ , ಉಪಾಧ್ಯಕ್ಷ ಬಾಳೆಕುಟ್ಟಿರ ಬೋಪಯ್ಯ, ಮುಖಂಡರಾದ ಸಂಪತ್, ಪಿ.ರವಿ, ಅಶ್ರಫ್ ಆಲಿ, ನಾಗಮ್ಮ, ಇಟ್ಟೀರ ಸೋಮಯ್ಯ, ಕೆ.ಎ.ಅಯೂಬ್, ಅಲ್ಪ ಸಂಖ್ಯಾತರ ಘಟಕದ ಆರ್.ಎ.ಸಕ್ಲೇನ್, ಮಂಡೇಪಂಡ ಬಿದ್ದಪ್ಪ , ಮೇರಿಯಂಡ ಕೆ.ಪೂವಯ್ಯ, ಪಡಿಕಲ್ ಕುಸುಮ ಸೇರಿದಂತೆ ತಾಲೂಕಿನ ಪಕ್ಷದ ಕಾರ್ಯಕರ್ತರು ಹಾಜರಿದ್ದರು. ಈ ಸಂದರ್ಭದಲ್ಲಿ ಕಲಾವಿದ ರಾಜು ಮತ್ತು ತಂಡದವರು ಕ್ರಾಂತಿಗೀತೆಗಳನ್ನು ಹಾಡಿದರು.

ಹೆಸರು ಬದಲಾವಣೆ

ದ.ಕ. ಜಿಲ್ಲೆ ಮಂಗಳೂರು ತಾಲೂಕು, ಶಕ್ತಿನಗರ, ಮಂಜಡ್ಕ 1ನೇ ಕ್ರಾಸ್, Dr # 10-171/17(1) ಮನೆ ನಿವಾಸಿ ಜಯಂತ ಪ್ರಭು ಎಂಬವರ ಮಗನಾದ 27 ವರ್ಷ ಪ್ರಾಯದ **ಜಗದೀಶ್** ಎಂಬ ನಾನು ನನ್ನ ಹೆಸರನ್ನು **ಜಗದೀಶ್ ಪ್ರಭು** ಎಂದು ಅಫಿದವಿತ್ ಮೂಲಕ 27ನೇ ಅಕ್ಟೋಬರ್ 2017ರಂದು ಬಂಟ್ವಾಳದ ನೋಟರಿ ರಿಚರ್ಡ್ ಕೋಸ್ತಾ ಎಂ.ರವರ ಎದುರು ಬದಲಾಯಿಸಿಕೊಂಡಿರುತ್ತೇನೆ. ನನ್ನ ಮುಂದಿನ ಎಲ್ಲಾ ವ್ಯವಹಾರಗಳಲ್ಲಿಯೂ **ಜಗದೀಶ್ ಪ್ರಭು** ಎಂದೇ ಬಳಕೆಯಾಗಲಿದೆ.

IN THE COURT OF THE PRINCIPAL CIVIL JUDGE AT MANGALURU, D.K.

P&SC No.52/2017

In the matter of Share Certificates of Late Hosabettu Das, S/o Late Tima Gurikara - Deceased

Smt. Meenakshi Das and Others - Petitioners

NOTICE

Whereas, the aforesaid Petitioners have applied to this Court for the grant of Succession Certificate in their names, in respect of Share Certificates described in the Schedule of the Petition, standing in the name of Late Hosabettu Das, S/o Late Tima Gurikara, who was last residing at 'Parna Kuti', Door No.6-60, Kulai, Mangaluru - 575019, and who died on 18.08.2000 at the said address. The said Petition is posted for hearing before the Honorable Court on the 25th day of November 2017 at 11.00 a.m.

Anybody opposing the grant of Succession Certificate may appear in person or through pleader and file their objections if any, failing which the matter will be heard and decided exparte.

Given under my hand and seal of the Court, on this 3rd day of November 2017.

(By Order of the Court)

Sd/-, SHIRASTEDAR
Court of Civil Judge, Mangaluru, D.K.

(U. VARADARAJ NAYAK)
Opp. Sri Devi Nursing Home,
Karangalpady,
Mangaluru - 575003.
ADVOCATE FOR PETITIONERS

Mangalore
06-11-2017

ಗಾಂಜಾ ಮಾರಾಟ: ಆರೋಪಿಗಳ ಬಂಧನ

ದಿಗಂತ ವರದಿ: ಮಂಗಳೂರು, ನ. 6

ನಗರದಲ್ಲಿ ದಿನದಿಂದ ದಿನಕ್ಕೆ ಗಾಂಜಾ ಮಾರಾಟ ಪ್ರಕರಣ ಹೆಚ್ಚುತ್ತಿದ್ದು, ಅಲ್ಲಲ್ಲಿ ಆರೋಪಿಗಳನ್ನು ಪೊಲೀಸರು ಬಂಧಿಸುತ್ತಿದ್ದಾರೆ. ಭಾನುವಾರ ಗಾಂಜಾ ಸೇವನೆ ಮಾಡುತ್ತಿದ್ದ ಆರು ಮಂದಿ ಮತ್ತು ಗಾಂಜಾ ಮಾರಾಟ ಮಾಡುತ್ತಿದ್ದ ಓರ್ವನನ್ನು ಬಂಧಿಸಲಾಗಿದೆ. ಸೋಮವಾರವೂ ಇಬ್ಬರು ಗಾಂಜಾ ಮಾರಾಟಗಾರರನ್ನು ಪೊಲೀಸರು ಬಂಧಿಸಿದ್ದಾರೆ.

ಕಾಸರಗೋಡು ಉಪ್ಪಳಗೇಟ್ ಸಮೀಪದ ಶಾರದಾನಗರ ನಿವಾಸಿ ಕಿರಣ್ (24) ಮತ್ತು ಕಾಸರಗೋಡು ಮಜಿಬೈಲು ಕೆಳಗಿನ ಮನೆಯ ನಿತಿನ್ ಕುಮಾರ್ ಯಾನೆ ಉದಯಕುಮಾರ್ ರಾವ್ (43) ಬಂಧಿತರು.

ಆರೋಪಿಗಳಿಂದ ಒಟ್ಟು 1,01,700 ಮೊತ್ತದ ಸೊತ್ತುಗಳನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಖಚಿತ ಮಾಹಿತಿ ಮೇರೆಗೆ ದಾಳಿ ನಡೆಸಿದ ಪೊಲೀಸರು ಸೋಮೇಶ್ವರ ಗ್ರಾಮದ ತೊಕೊಟ್ಟು ಶಿವಾಜಿ ಸಮಿತಿ ಸ್ವಾಮಿ ಕೊರಗಜ್ಜ ಕಟ್ಟೆ ಬಳಿ ಆರೋಪಿಗಳನ್ನು ಬಂಧಿಸುವಲ್ಲಿ ಯಶಸ್ವಿಯಾಗಿದ್ದಾರೆ. ಆರೋಪಿಗಳ ಬಳಿಯಿದ್ದ 37,700 ಮೌಲ್ಯದ 2.275 ಕೆ.ಜಿ.ಗಾಂಜಾ, 2 ಬೈಕ್, 5 ಮೊಬೈಲ್ ಫೋನ್, 3,500 ನಗದನ್ನು ವಶಪಡಿಸಿಕೊಂಡಿದ್ದಾರೆ.

ಕಾರ್ಯಾಚರಣೆಯಲ್ಲಿ ಪೊಲೀಸ್ ನಿರೀಕ್ಷಕರಾದ ಮಹಮ್ಮದ್ ಷರೀಫ್, ಪೊಲೀಸ್ ಉಪ ನಿರೀಕ್ಷಕರಾದ ಲತಾ ಕೆ.ಎನ್., ಮತ್ತು ಸಿಬ್ಬಂದಿಗಳಾದ ಜಗದೀಶ್, ಶಾಜು ನಾಯರ್, ಶ್ರೀಲತಾ, ಜಾಯ್ಸ್, ಕಿಶೋರ್ ಪೂಜಾರಿ ಮತ್ತು ಭಾಸ್ಕರ ಪಾಲ್ಗೊಂಡಿದ್ದರು.

ಸಾಹಿತಿ ಗೋಪಾಲ್ ರಾವ್ ಇನ್ನಿಲ್ಲ

ದಿಗಂತ ವರದಿ: ಸುಬ್ರಹ್ಮಣ್ಯ, ನ.6

ಕಡಬ ತಾಲೂಕಿನ ಬಿಳಿನೆಲೆ ಗ್ರಾಮದ ಹಿರಿಯ ಸಾಹಿತಿ ಹಾಗೂ ರಾಷ್ಟ್ರಪ್ರಶಸ್ತಿ ವಿಜೇತ ಧಾರ್ಮಿಕ ಮುಂದಾಳು ಗೋಪಾಲ್ ರಾವ್ ಬಿಳಿನೆಲೆ (80) ಅವರು ಸೋಮವಾರ ಮಂಗಳೂರಿನ ಖಾಸಾಗಿ ಆಸ್ಪತ್ರೆಯಲ್ಲಿ ನಿಧನರಾದರು. ಇವರು ಪತ್ನಿ, ಎರಡು ಪುತ್ರರು ಹಾಗೂ ಈರ್ವರು ಪುತ್ರಿಯರನ್ನು ಅಗಲಿದ್ದಾರೆ.

ಖ್ಯಾತ ಸಾಹಿತಿಯಾಗಿದ್ದ ಇವರು ಹಲವಾರು ಪುಸ್ತಕಗಳನ್ನು ಬರೆದಿದ್ದರು. ತಾಲೂಕು ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿ ಇವರು ಸೇವೆ ಸಲ್ಲಿಸಿದ್ದರು.



ಕವನ, ಚುಟುಕು, ಕಥೆ, ಸಾಹಿತ್ಯ ಇತ್ಯಾದಿಗಳನ್ನು ಬರೆದಿದ್ದಾರೆ. ಗೋರಾಕೆ ಎಂಬ ಕಾವ್ಯ ನಾಮದಿಂದ ಅನೇಕ ಕವನಗಳನ್ನು ಬರೆದಿದ್ದರು. ಅಲ್ಲದೆ ಸಾಹಿತ್ಯ ಕ್ಷೇತ್ರದ ಸಾಧನೆಗಾಗಿ ರಾಷ್ಟ್ರಪ್ರಶಸ್ತಿ ಪಡೆದಿದ್ದರು.

ಹಲವಾರು ಸಂಘ ಸಂಸ್ಥೆಗಳಲ್ಲಿ ದುಡಿದವರು. ಅಲ್ಲದೆ ಹಲವಾರು ಧಾರ್ಮಿಕ ಶ್ರದ್ಧಾ ಕೇಂದ್ರದ ಜೀರ್ಣೋದ್ಧಾರದಲ್ಲಿ ಸಕ್ರೀಯವಾಗಿ ಶ್ರಮ ವಹಿಸಿದವರು. ಕಡಬ ಶ್ರೀಕಂಠೇಶ್ವರ ದೇವಳ ಮತ್ತು ಬಿಳಿನೆಲೆ ಶ್ರೀ ಗೋಪಾಲಕೃಷ್ಣ ದೇವಳದ ಜೀರ್ಣೋದ್ಧಾರ ಸಮಿತಿಯ ಗೌರವಾಧ್ಯಕ್ಷರಾಗಿ ದುಡಿದವರು. 1998ರಲ್ಲಿ ಬಿಳಿನೆಲೆ ಗೋಪಾಲಕೃಷ್ಣದೇವಳದ ಬ್ರಹ್ಮಕಲಶೋತ್ಸವ ಸಮಿತಿಯ ಅಧ್ಯಕ್ಷರಾಗಿದ್ದರು, ಬಳಿಕ 2014ರಲ್ಲಿ ನಡೆದ ಬ್ರಹ್ಮಕಲಶೋತ್ಸವದಲ್ಲಿ ಅಧ್ಯಕ್ಷರಾಗಿ ದುಡಿದಿದ್ದರು. ಕಡಬ ಶ್ರೀಕಂಠೇಶ್ವರ ಮಹಾಗಣಪತಿ ದೇವಸ್ಥಾನದ ಆಡಳಿ ಸಮಿತಿ ಅಧ್ಯಕ್ಷರಾಗಿದ್ದರು.

ಬಿಳಿನೆಲೆ ಶ್ರೀ ಗೋಪಾಲಕೃಷ್ಣ ಪ್ರೌಢಶಾಲೆಯ ಸ್ಥಾಪನೆಯಲ್ಲಿ ದುಡಿದವರು. ಬಿಳಿನೆಲೆ ಸರಕಾರಿ ಪ್ರಾಥಮಿಕ ಶಾಲೆಯ ಮುಖ್ಯಗುರುಗಳಾಗಿ ಸೇವೆ ಸಲ್ಲಿಸಿದ್ದರು. ಕಡಬ ಸರಕಾರಿ ಪದವಿಪೂರ್ವ ಕಾಲೇಜಿನ ಪ್ರೌಢಶಾಲಾ ವಿಭಾಗದಲ್ಲಿ ಹಿಂದಿ ಅಧ್ಯಾಪಕರಾಗಿ ಪದೋನ್ನತಿ ಹೊಂದಿ ಸೇವೆ ಸಲ್ಲಿಸಿದವರು. ಸಂಘ ಸಂಸ್ಥೆಗಳಲ್ಲಿ ದುಡಿದು ಅವುಗಳ ಔನತ್ಯಕ್ಕೆ ಪ್ರಾಮಾಣಿಕ ಪ್ರಯತ್ನ ಮಾಡಿದ ಇವರು ಜನಾನುರಾಗಿಯಾಗಿದ್ದರು.

BEFORE THE NOMINEE OF DEPUTY REGISTRAR OF CHITS, MANGALORE
Sub Division, Mangalore

Dispute No.: DRP/CFS/67/2017-2018

Between:
M/S. Sinchana Chits Co. Pvt. Ltd.,
Belthangady Branch
... Petitioner

And

Mrs. Sujatha and others
.... Respondents

R-2. **Mr. Ravindra Poojary**
S/o. Mundappa Sanil, Rashmi Nivasa, Sangabettu Village, Siddakatte Post, Bantwal T.Q.

R-3. **Mr. Dinesh D.**
S/o. Babu Shetty, Dembedar House, Koragatta Post, Ajjibettu Village, Bantwal T.Q.

Notice

Please take notice that the above Petition has been filed against you for recovery of the amount due to the Petitioner. Now the case stands posted to **22-11-2017** for your appearance at **4 P.M.** in Sinchana Chits Pvt. Ltd. Shasthri Complex, Main Road, B.C. Road. You may appear on that day before the undersigned either in person or through your advocate. Otherwise the matter will be decided in your absence.

Given under my hand and seal of the court on this 26th day of October 2017 at Mangalore

/By Order of the Court/

Sd/- **Ajith Kumar Rao Addoor**
Advocate & Nominee
IInd floor, Padma Complex, Jodumarga,
Bantwal-574219, D.K.

IN THE COURT OF THE III ADDL. CIVIL JUDGE AND J.M.F.C AT UDUPI

Crl. Mis. Case No. 286/2017

Between:

1. **Sarojini Shedthi**
   Aged about 70 years
2. **Surekha Shetty**
   Aged about 42 years
3. **Mallika Shetty**
   Aged about 40 years
4. **Santhosh Shetty**
   Aged about 38 Years

No. 1 is the wife and Nos 2. To 4 are the children of Late Sundara Shetty and all are residing at Kencha Barpani, Kuthayar Village, Pilar Post, Udupi Taluk & District
... Petitioners

And

The Tahashildar, Udupi
...Respondent

TO WHOMSOEVER IT MAY CONCERN

Whereas the petitioners are filed the above petition seeking an order directing the respondent to make an entry of date of death of father of the petitioner **"SUNDARA SHETTY"** died on **07-11-2004** (Seven, November Two Thousand Four) at Kuthyar Village, Udupi Taluk. Interested person/s may appear and file objections if any in the matter either in person or through Advocate on the **16th day of November, 2017** at 11 a.m. otherwise the matter will be heard and decided on that day.

Given under my hand and seal of the court this 30th day of October

/By Order of the Court/
Sd/- **Sheristedar**
Prl. Civil Judge and JMFC,
Court, Udupi

Sd/- **(Mithun Kumar)**
Advocate for Petitioners

ಸಹಕಾರ ಸಂಘಗಳ ಸಹಾಯಕ ನಿಬಂಧಕರು ಹಾಗೂ ಚೀಟಿ ನಿಬಂಧಕರು, ಮಂಗಳೂರು ಉಪವಿಭಾಗ, ಮಂಗಳೂರು ಇವರ ನ್ಯಾಯಾಲಯದಲ್ಲಿ

ಪ್ರಕರಣ ಸಂ.:06/2017-18

ಫೋರ್‌ಮನ್,
ಸಿಂಚನಾ ಚಿಟ್ಸ್ ಪ್ರೈ.ಲಿ.,
ಮಲ್ಲಿಕಟ್ಟೆ, ಮಂಗಳೂರು
... ವಾದಿ

ವಿರುದ್ಧ

1. ರವಿ, ಬಿನ್ ಸೇಸಪ್ಪ ಮೂಲ್ಯ
ಇಡ್ಕೋಡು ಅಂಚೆ, ಬಂಟ್ವಾಳ
... ಪ್ರತಿವಾದಿಗಳು

ನೋಟೀಸು

ವಾದಿಯವರು ನಿಮ್ಮ ವಿರುದ್ಧ ದಾವೆಯನ್ನು ನಿಮ್ಮಿಂದ ಸಲ್ಲತಕ್ಕ ಸಾಲದ ವಸೂಲಾತಿಗಾಗಿ ದಾಖಲಿಸಿರುತ್ತಾರೆ. ಸದರಿ ದಾವೆಯು **ದಿನಾಂಕ 21-11-2017ರಂದು ಅಪರಾಹ್ನ 3.00 ಗಂಟೆಗೆ** ನಿಮ್ಮ ಹಾಜರಾತಿ ಇದ್ದು, ಸದರಿ ದಿವಸ ನೀವು ಹಾಜರಾಗುವಂತೆ ಈ ಮೂಲಕ ತಿಳಿಸಲಾಗಿದೆ. ತಪ್ಪಿದಲ್ಲಿ ದಾವೆಯನ್ನು ನಿಮ್ಮ ಅನುಪಸ್ಥಿತಿಯಲ್ಲಿ ಏಕಪಕ್ಷೀಯವಾಗಿ ತೀರ್ಮಾನಿಸಲಾಗುವುದು. ಪುನಃ ಯಾವುದೇ ನೋಟೀಸನ್ನು ನೀಡಲಾಗುವುದಿಲ್ಲವೆಂದು ಅಂತಿಮವಾಗಿ ತಿಳಿಸಲಾಗಿದೆ.

ನನ್ನ ಸ್ವಸಹಿ ಹಾಗೂ ನ್ಯಾಯಾಲಯದ ಮೊಹರಿನೊಂದಿಗೆ ದಿನಾಂಕ 31-10-2017 ರಂದು ನೀಡಲಾಗಿದೆ.

ಸಹಿ/- **ಸಹಕಾರ ಸಂಘಗಳ ಸಹಾಯಕ ನಿಬಂಧಕರು(ಚಿಟ್ಸ್)**
ಮಂಗಳೂರು ಉಪವಿಭಾಗ, ಮಂಗಳೂರು

IN THE COURT OF THE DEPUTY REGISTRAR OF CO-OP. SOCIETIES & CHITS MANGALORE DIVISION AT MANGALORE

DISPUTE NO : 129/2014-15

BETWEEN:
M/S: NAVACHETHANA CHITS CO. PVT. LTD.
...DISPUTANT

AND

MR. MELWYN STEEVEN RODRIGUES & OTHERS
...OPPONENTS

NOTICE

To:
R1(a) **CYPRIAN RODRIGUES**
R4 **Mr. VIDHYADHAR**
R D'souza Compound, S/o. SHYAMA DEVADIGA, Kadri tall gate,1-27-2184-22, Ashok Nagar, Mangalore. 575002 Ward No-1, Derebail, Mangalore-575006

Take notice that the above dispute is filed against you for recovery of chit amount by the Disputant. Now the above case stands posted to **16-11-2017 at 3:00 PM** for your appearance at the office address of the Disputant at M/s Navachethana Chits Co. Pvt. Ltd., Beauty Plaza Building, 1st Floor, Balmatta Road, Mangalore-575001.

If you fail to appear on that day at the Disputant office, the matter will be decided in your absence.

Given under my hand & seal on this 6th day of November 2017 at Mangalore.

Sd/- **Anitha Kini K,**
Advocate and Chits Nominee
Mangalore, D.K

Sd/- **Harish Kumar**
Advocate for Petitioner

ಸಾರ್ವಜನಿಕರ ಗಮನಕ್ಕೆ

ನನ್ನ ಕಕ್ಷಿಗಾರರಾದ ಎಂ. ಶಾರದಾ ಕಿಣಿ ಕೋಂ: ಎಂ. ದೇವದಾಸ ಕಿಣಿ ಅನಂತನಗರ, 1ನೇ ಹಂತ, ಮಣಿಪಾಲ, ಉಡುಪಿ ತಾಲೂಕು. ಇವರು ಉಡುಪಿ ತಾಲೂಕು 80 ಬಡಗಬೆಟ್ಟು ಗ್ರಾಮದ ಸ.ನಂ. 235/3 ರಲ್ಲಿ (235/3ಪಿ5) ರಲ್ಲಿ ಪರಿವರ್ತಿತ 7 ಸೆಂಟ್ಸು ಜಮೀನನ್ನು ದಿನಾಂಕ 21-01-1986 ರಲ್ಲಿ ಉಡುಪಿ ಸಬ್ ರಿಜಿಸ್ಟ್ರಿ ಆಫೀಸಿನ ಕ್ರಯ ದಸ್ತಾವೇಜು ನಂಬ್ರ 1583/1985-86 ರಂತೆ ಕ್ರಯಕ್ಕೆ ಪಡೆದಿದ್ದು ಸದ್ರಿ ಕ್ರಯ ದಸ್ತಾವೇಜಿನ ಮೂಲಪ್ರತಿ ಕಳೆದು ಹೋಗಿರುತ್ತದೆ. ಸದ್ರಿ ದಸ್ತಾವೇಜು ಯಾರಿಗಾದರೂ ಸಿಕ್ಕಿದ್ದಲ್ಲಿ ಅಥವಾ ಸದ್ರಿ ಜಮೀನಿನಲ್ಲಿ ಯಾರಿಗಾದರೂ ಹಕ್ಕು ಸಂಬಂಧ ಇದ್ದಲ್ಲಿ ಇಂದಿನಿಂದ 15 ದಿವಸದ ಒಳಗೆ ಸದ್ರಿ ದಸ್ತಾವೇಜನ್ನು ಈ ಕೆಳಗಿನ ವಿಳಾಸಕ್ಕೆ ತಲುಪಿಸತಕ್ಕದ್ದು ಅಥವಾ ಅಹವಾಲು ಸಲ್ಲಿಸತಕ್ಕದ್ದು ಎಂದು ಈ ಮೂಲಕ ತಿಳಿಯಬಯಸುತ್ತೇನೆ.

ಸಹಿ/- **ಮೋಹನ್‌ದಾಸ್ ಪೈ ಬಿ.** ಬಿ.ಎ.ಎಲ್‌ಎಲ್‌ಬಿ.,
ವಕೀಲರು, ಚಾಂಟರ್ ನಂಬ್ರ-3,
1ನೇ ಮಹಡಿ, ಮೆಡಿಕೇರ್ ಬಿಲ್ಡಿಂಗ್,
ಕೋರ್ಟ್ ಹಿಂಬದಿ ರಸ್ತೆ, ಉಡುಪಿ-1.
ಮೊ. 9480231127

ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ, ಕಾರ್ಯಪಾಲಕ ಇಂಜಿನಿಯರ್‌ರವರ ಕಛೇರಿ, ಮೈಸೂರು ವಿಭಾಗ, ಮೈಸೂರು

www.eemys@kpwd.gov.in ದೂರವಾಣಿ ಸಂಖ್ಯೆ/ಫ್ಯಾಕ್ಸ್ ನಂ: 08212420810

ಟೆಂಡರ್ ಸಂಖ್ಯೆ: 35/2017-18 ದಿನಾಂಕ: 03.11.2017

ಅಲ್ಪಾವಧಿ ಐಟಂವಾರು ಟೆಂಡರ್ ಅಧಿಸೂಚನೆ

ಕರ್ನಾಟಕ ರಾಜ್ಯಪಾಲರ ಪರವಾಗಿ ಮೈಸೂರು ಲೋಕೋಪಯೋಗಿ, ಬಂದರು ಮತ್ತು ಒಳನಾಡು ಜಲಸಾರಿಗೆ ಇಲಾಖೆ ವಿಭಾಗದ ಕಾರ್ಯಪಾಲಕ ಇಂಜಿನಿಯರ್‌ರವರಿಂದ ವಿಭಾಗ ವ್ಯಾಪ್ತಿಗೆ ಒಳಪಡುವ **ರಸ್ತೆ ಕಾಮಗಾರಿಗೆ** ಅಲ್ಪಾವಧಿ ಐಟಂವಾರು ಟೆಂಡರ್ ಪ್ರಕಟಣೆಯನ್ನು ಕೆ.ಡಬ್ಲ್ಯೂ-2 ರ ನಿಬಂಧನೆ ಮತ್ತು ಷರತ್ತುಗಳನ್ವಯ ಹೊರಡಿಸಲಾಗಿದೆ. **ಕಾಮಗಾರಿಯ ಹೆಸರು:** 1) ಮೈಸೂರು ತಾಲ್ಲೂಕು ಬಿ.ಎನ್. (ಬಿ.ಹೆಚ್.ಎ) ರಸ್ತೆಯಿಂದ ಕೂಡನಹಳ್ಳಿ-ಸೋಮೇಶ್ವರಪುರ-ಕುಂಬ್ರಹಳ್ಳಿ-ಮಾರಶೆಟ್ಟಹಳ್ಳಿ ಮಾರ್ಗವಾಗಿ ಲಲಿತಾದ್ರಿಪುರ ಸೇರುವ ರಸ್ತೆ ಸ: 9.97 ಕಿ.ಮೀ. ರಿಂದ 10.42 ಕಿ.ಮೀ. ವರೆಗೆ ರಸ್ತೆ ಅಭಿವೃದ್ಧಿ ಕಾಮಗಾರಿ. **ಟೆಂಡರಿಗಿಟ್ಟ ಮೊತ್ತ ರೂ.45.87 ಲಕ್ಷಗಳು, ಇ.ಎಂ.ಡಿ. ಮೊತ್ತ ರೂ.0.92 ಲಕ್ಷಗಳು.** ಟೆಂಡರನ್ನು ಇ-ಪ್ರೊಕ್ಯೂರ್‌ಮೆಂಟ್ ಪೋರ್ಟಲ್‌ನಲ್ಲಿ **(http://eproc.karnataka.gov.in) ದಿನಾಂಕ: 03.11.2017 ರಿಂದ 16.11.2017 ಸಂಜೆ 4.00 ಘಂಟೆವರೆಗೆ** ಸಲ್ಲಿಸಬಹುದಾಗಿರುತ್ತದೆ. 1ನೇ ದರ್ಜೆ ಗುತ್ತಿಗೆದಾರರು ಇ-ಪ್ರೊಕ್ಯೂರ್‌ಮೆಂಟ್ ನೋಂದಾಯಿಸಿರುವವರು ಭಾಗವಹಿಸಬಹುದು ಮತ್ತು ಕಾಮಗಾರಿಗೆ ಸಂಬಂಧಿಸಿದಂತೆ ಹೆಚ್ಚಿನ ವಿವರಗಳು ಬೇಕಾದ್ದಲ್ಲಿ ಕೆಳಗೆ ಸಹಿ ಮಾಡಿರುವವರ ಕಛೇರಿಯಲ್ಲಿ ಕೆಲಸದ ವೇಳೆಯಲ್ಲಿ ಪಡೆಯಬಹುದು. ಟೆಂಡರ್ ಪ್ರಕಟಣೆಯಲ್ಲಿ ಯಾವುದೇ ತಿದ್ದುಪಡಿ ಅಥವಾ ಮಾರ್ಪಾಡುಗಳಾದಲ್ಲಿ ಇ-ಪ್ರೊಕ್ಯೂರ್‌ಮೆಂಟ್ ಮೂಲಕ ಮಾತ್ರ ಪ್ರಕಟಿಸಲಾಗುವುದು.

ಸಹಿ/- ಕಾರ್ಯಪಾಲಕ ಇಂಜಿನಿಯರ್
ಲೋ. ಬಂ. ಮತ್ತು ಒ. ಜ. ಸಾರಿಗೆ ಇಲಾಖೆ,
ಮೈಸೂರು ವಿಭಾಗ, ಮೈಸೂರು

DIPR/DD/MYS/Kavita/346

ONGC
एमआरपीएल
MRPL

ಎಂಆರ್‌ಪಿಎಲ್
(ತೈಲ ಹಾಗೂ ನೈಸರ್ಗಿಕ ಅನಿಲ ನಿಗಮ ನಿಯಮಿತ, ಇದರ ಅಂಗ ಸಂಸ್ಥೆ)
ಮಂಗಳೂರು ರಿಫೈನರಿ ಎಂಡ್ ಪೆಟ್ರೋಕೆಮಿಕಲ್ಸ್ ಲಿ.
CIN : L23209KA1988GOI008959

एक कदम स्वच्छता की ओर

ಇ-ಸಾರ್ವಜನಿಕ ಟೆಂಡರ್ ಪ್ರಕಟಣೆ

ಟೆಂಡರ್ ಸಂ. / ಕಾಮಗಾರಿಯ ಹೆಸರು	ಟೆಂಡರ್ ಕಾಲಾವಧಿ
1. **3300005077** : ಟೆಂಡರಿನ ಪ್ರಕಾರ ಎಂಆರ್‌ಪಿಎಲ್ ಪ್ಲಾಂಟ್‌ಗೆ ಫೈರ್ ವಾಟರ್ / ಸಿಬಿಡಿ / ಕೂಲಿಂಗ್ ವಾಟರ್ ಲೈನ್ಸ್ ದುರಸ್ತಿಗೆ ವಾರ್ಷಿಕ ದರ ಒಪ್ಪಂದ.	ಟೆಂಡರ್ ದಾಖಲೆ ಮಾರಾಟ: 04.11.2017 ರಿಂದ 04.12.2017ರ, 15.00 ಗಂಟೆ **ಪ್ರಸ್ತಾವ ಸಲ್ಲಿಸುವ ಸಮಾಪ್ತಿ ದಿನಾಂಕ: 04.12.2017ರ 15.00 ಗಂಟೆ** ಪ್ರಸ್ತಾವ ತೆರೆಯುವ ದಿನಾಂಕ: 04.12.2017ರ, 15.30 ಗಂಟೆ
2. **3300005084** : ಟೆಂಡರಿನ ಪ್ರಕಾರ ಪಿಸಿಟಿ ಪ್ರದೇಶದಲ್ಲಿರುವ 54" & 36" ಫ್ಲೇರ್ ಲೈನ್‌ನ ಪೈಪ್‌ಲೈನ್ ಸೋರಿಕೆ ನಿರ್ಬಂಧಿಸುವಿಕೆ ಮತ್ತು ಆನ್‌ಲೈನ್ ಪೈಪ್‌ನ ಪುನಃಸ್ಥಾಪನೆ.	ಟೆಂಡರ್ ದಾಖಲೆ ಮಾರಾಟ: 06.11.2017 ರಿಂದ 05.12.2017ರ, 15.00 ಗಂಟೆ **ಪ್ರಸ್ತಾವ ಸಲ್ಲಿಸುವ ಸಮಾಪ್ತಿ ದಿನಾಂಕ: 05.12.2017ರ 15.00 ಗಂಟೆ** ಪ್ರಸ್ತಾವ ತೆರೆಯುವ ದಿನಾಂಕ: 05.12.2017ರ, 15.30 ಗಂಟೆ
3. **3300005024** : ಟೆಂಡರಿನ ಪ್ರಕಾರ ಎಂಆರ್‌ಪಿಎಲ್‌ನಲ್ಲಿ ರಸ್ತೆಗೆ ಡಾಮರು ಮೇಲ್ಪದರ ಹಾಕಲು ಟೆಂಡರ್.	ಟೆಂಡರ್ ದಾಖಲೆ ಮಾರಾಟ: 07.11.2017 ರಿಂದ 16.12.2017ರ, 15.00 ಗಂಟೆ **ಬಿಡ್ ಪೂರ್ವದ ಸಭೆ: 27.11.2017ರಂದು 10.30 ಗಂಟೆ ಗೆ** **ಪ್ರಸ್ತಾವ ಸಲ್ಲಿಸುವ ಸಮಾಪ್ತಿ ದಿನಾಂಕ: 16.12.2017ರ 15.00 ಗಂಟೆ** ಪ್ರಸ್ತಾವ ತೆರೆಯುವ ದಿನಾಂಕ: 16.12.2017ರ, 15.30 ಗಂಟೆ
4. **3300005094** : ಹಂತ III ಪಿಎಫ್‌ಸಿಸಿ ಕೂಲಿಂಗ್ ಟವರ್‌ನ ಸ್ವಚ್ಛಗೊಳಿಸಿದ / ಹೊಸ ಫಿಲ್ಸ್‌ನ ತೆಗೆಯುವಿಕೆ, ಸ್ವಚ್ಛಗೊಳಿಸುವಿಕೆ, ಅನುಸ್ಥಾಪನೆ.	ಟೆಂಡರ್ ದಾಖಲೆ ಮಾರಾಟ: 07.11.2017 ರಿಂದ 06.12.2017ರ, 15.00 ಗಂಟೆ **ಪ್ರಸ್ತಾವ ಸಲ್ಲಿಸುವ ಸಮಾಪ್ತಿ ದಿನಾಂಕ: 06.12.2017ರ 15.00 ಗಂಟೆ** ಪ್ರಸ್ತಾವ ತೆರೆಯುವ ದಿನಾಂಕ: 06.12.2017ರ, 15.30 ಗಂಟೆ

ಹೆಚ್ಚಿನ ವಿವರಗಳಿಗೆ **www.mrpl.co.in** ಅಥವಾ **www.tenderwizard.com** ಗೆ ಲಾಗ್‌ಆನ್ ಮಾಡಿ ಮತ್ತು ಓಪನ್ ಟೆಂಡರು ಲಿಂಕನ್ನು ಕ್ಲಿಕ್ ಮಾಡಿರಿ. ಟೆಂಡರಿನ ಯಾವುದೇ ತಿದ್ದುಪಡಿ /ಬದಲಾವಣೆಗಳನ್ನು ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟಿನಲ್ಲಿ ಪ್ರಕಟಿಸಲಾಗುತ್ತದೆ ಮತ್ತು ದಿನಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದಿಲ್ಲ. ನಿರೀಕ್ಷಿತ ಬಿಡ್ಡುದಾರರು ಯಾವುದಾದರೂ ತಿದ್ದುಪಡಿ / ಬದಲಾವಣೆಗಳನ್ನು ಇವೆಯೇ ಎಂದು ಗಮನಿಸಲು ಈ ಮೇಲಿನ ಎಂಆರ್‌ಪಿಎಲ್ ಇ-ಪ್ರೋಕ್ಯೂರ್‌ಮೆಂಟ್ ವೆಬ್‌ಸೈಟ್‌ನ್ನು ಕಾಲಕಾಲಕ್ಕೆ ವೀಕ್ಷಿಸುತ್ತಿರಬೇಕು.

ಎಲ್ಲರೂ ಒಟ್ಟಾಗಿ ಸ್ವಚ್ಛ ಭಾರತವನ್ನು ನಿರ್ಮಿಸೋಣ

ಶ್ನೀಡರ್ ಇಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಡೆಡ್

ರಿ. ಕಚೇರಿ : 5ಸಿ/1, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಅತ್ತಿಬೇಲೆ, ಬೆಂಗಳೂರು- 562107, ಕರ್ನಾಟಕ.
ಸಿಐಎನ್ : ಯು32109ಕೆಎ1984ಪಿಎಲ್‌ಸಿ079103, ಫೋನ್ : 08067888300, ವೆಬ್‌ಸೈಟ್ : www.schneiderelectricpresident.com,
ಇ-ಮೇಲ್: priyanka.aggarwal@schneider-electric.com

ಶೇರುದಾರರಿಗೆ ನೋಟೀಸು

ವಿಷಯ : ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ (ಐಇಪಿಎಫ್)ಗೆ ಇಕ್ವಿಟಿ ಶೇರುಗಳ ವರ್ಗಾವಣೆ

ಕಾಲಕಾಲಕ್ಕೆ ತಿದ್ದುಪಡಿಯಾದಂತೆ (ಆ ನಿಯಮಗಳು) 2016ರ ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ ಅಥಾರಿಟಿ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ ಮತ್ತು ರೀಫಂಡ್) ನಿಯಮಗಳೊಂದಿಗೆ ಬರುವ ಕಂಪೆನಿಗಳ ಕಾಯ್ದೆ, 2013 (ಕಾಯ್ದೆ)ರ ಸೆಕ್ಷನ್ 124ರನ್ವಯ ಸತತ ಏಳು ವರ್ಷಗಳು ಅಥವಾ ಅದಕ್ಕಿಂತ ಹೆಚ್ಚು ಅವಧಿಗೆ ಡಿವಿಡೆಂಡ್ ಪಾವತಿಯಾಗದ/ಕ್ಲೈಮ್ ಮಾಡಿರದ ಸಂಬಂಧಿತ ಎಲ್ಲಾ ಶೇರುಗಳು ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ (ಐಇಪಿಎಫ್)ಗೆ ವರ್ಗಾವಣೆಯಾಗಬೇಕಾಗಿದೆ. ಆ ನಂತರ ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ ಅಥಾರಿಟಿ ಅಂತಹ ಶೇರುಗಳನ್ನು ಪ್ರತ್ಯೇಕ ಐಇಪಿಎಫ್ ಸಸ್ಪೆನ್ಸ್ ಅಕೌಂಟ್ ಒಂದರಲ್ಲಿ ಕಂಪೆನಿಯ ಹೆಸರಿನಲ್ಲಿ ನಿರ್ವಹಿಸುತ್ತದೆ.

ಮೇಲೆ ಹೇಳಲಾದ ನಿಬಂಧನೆಗಳನುಸಾರ ಕಂಪೆನಯ 2008-09ನೇ ವರ್ಷಕ್ಕಾಗಿ ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ (ಐಇಪಿಎಫ್)ಗೆ ವರ್ಗಾವಣೆಯಾಗಬೇಕಾಗಿರುವ ಶೇರುಗಳನ್ನು ಹೊಂದಿರುವ ಸಂಬಂಧಿತ ಶೇರುದಾರರಿಗೆ ಕಂಪೆನಿಯು 2017 ಏಪ್ರಿಲ್ 15ರಂದು ವೈಯಕ್ತಿಕ ನೋಟೀಸುಗಳನ್ನು ನೀಡಿತ್ತು. ಆದರನ್ವಯ, ಶೇರುಗಳನ್ನು ಐಇಪಿಎಫ್‌ಗೆ ವರ್ಗಾಯಿಸುವುದನ್ನು ತಪ್ಪಿಸಲು ಶೇರುಗಳ ವರ್ಗಾವಣೆಗಾಗಿ ನಿಗದಿತ ದಿನಾಂಕವಾದ 2017 ಮೇ 31ರ ಮೊದಲು ಪಾವತಿಯಾಗದ/ಕ್ಲೈಮ್ ಮಾಡಿರದ ಡಿವಿಡೆಂಡ್‌ನ್ನು ಕ್ಲೈಮ್ ಮಾಡಲು ಸಂಬಂಧಿತ ಶೇರುದಾರರಿಗೆ ಸಲಹೆ ನೀಡಿ 2017 ಏಪ್ರಿಲ್ 20ರಂದು ಹೊಸದಿಗಂತ ಮತ್ತು ಮಿಂಟ್ ನ್ಯೂಸ್ ಪೇಪರ್‌ನಲ್ಲಿ ಕಂಪೆನಿ ಜಾಹೀರಾತೊಂದನ್ನು ಪ್ರಕಟಿಸಿತ್ತು.

ಈಗ, ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ (ಎಂಸಿಎ) 2017 ಅಕ್ಟೋಬರ್ 13ನೇ ದಿನಾಂಕದ ತನ್ನ ಅಧಿಸೂಚನೆ ಮೂಲಕ ಇನ್‌ವೆಸ್ಟರ್ ಎಜುಕೇಶನ್ ಅಂಡ್ ಪ್ರೊಟೆಕ್ಷನ್ ಫಂಡ್ ಅಥಾರಿಟಿ (ಅಕೌಂಟಿಂಗ್, ಆಡಿಟ್, ಟ್ರಾನ್ಸ್‌ಫರ್ ಅಂಡ್ ರೀಫಂಡ್) 2ನೇ ತಿದ್ದುಪಡಿ ನಿಯಮಗಳು 2017ನ್ನು ಪ್ರಕಟಿಸಿದೆ. ತಿದ್ದುಪಡಿ ಮಾಡಲಾದ ನಿಯಮಗಳ ಪ್ರಕಾರ, ವಿತ್ತೀಯ ವರ್ಷ 2009-10ಕ್ಕೆ ಸಂಬಂಧಿಸಿದ ಡಿವಿಡೆಂಡ್‌ಗೆ ಸಂಬಂಧಿಸಿ ಇಕ್ವಿಟಿ ಶೇರುಗಳ ವರ್ಗಾವಣೆಗಾಗಿ ನಿಗದಿತ ದಿನಾಂಕ 2017 ಅಕ್ಟೋಬರ್ 31 ಆಗಿರುತ್ತದೆ.

ಆದ್ದರಿಂದ, ಇನ್ನು ಯಾವುದೇ ನೋಟೀಸು ನೀಡದೆ ತಿದ್ದುಪಡಿ ಮಾಡಲಾದ ನಿಯಮಗಳನುಸಾರ, ನಿಗದಿತ ದಿನಾಂಕವಾದ 2017 ಅಕ್ಟೋಬರ್ 31ರಿಂದ 30 ದಿನಗಳೊಳಗೆ ವಿತ್ತೀಯ ವರ್ಷ 2009-10ರ ನಂತರದ ಕ್ಲೈಮ್ ಮಾಡದೆ/ಪಾವತಿಯಾಗದೆ ಉಳಿದಿರುವ ಡಿವಿಡೆಂಡ್‌ಗೆ ಸಂಬಂಧಿಸಿದ ಶೇರುದಾರರ ಶೇರುಗಳ ವರ್ಗಾವಣೆಗಾಗಿ ಕಂಪೆನಿ ಕ್ರಮ ಆರಂಭಿಸಲು ಮುಂದಾಗಲಿದೆ ಎಂದು ಶೇರುದಾರರಿಗೆ ಈ ಮೂಲಕ ನೋಟೀಸು ನೀಡಲಾಗಿದೆ. ಅದಕ್ಕಾಗಿ ಸಂಬಂಧಿತ ಶೇರುದಾರರಿಗೆ ವೈಯಕ್ತಿಕ ನೋಟೀಸುಗಳನ್ನು ಕಂಪೆನಿ ನೀಡಿದೆ.

ತಿದ್ದುಪಡಿ ಮಾಡಲಾದ ನಿಯಮಗಳ ಪ್ರಕಾರ, ನ್ಯಾಶನಲ್ ಸೆಕ್ಯುರಿಟೀಸ್ ಡೆಪೊಸಿಟರಿ ಲಿಮಿಟೆಡ್ (ಎನ್‌ಎಸ್‌ಡಿಎಲ್) ಮತ್ತು ಸೆಂಟ್ರಲ್ ಡೆಪೊಸಿಟರಿ ಸರ್ವಿಸಸ್ (ಇಂಡಿಯಾ) ಲಿ. (ಸಿಡಿಎಸ್‌ಎಲ್)ನೊಂದಿಗೆ ಅವರ ಡೆಪೊಸಿಟರಿ ಪಾರ್ಟಿಸಿಪ್ಯಾಂಟ್ಸ್ (ಡಿಪಿ)ಗಳಾದ, ಅನುಕ್ರಮವಾಗಿ ಪಂಜಾಬ್ ನ್ಯಾಶನಲ್ ಬ್ಯಾಂಕ್ ಮತ್ತು ಎಸ್‌ಬಿಐ ಕ್ಯಾಪ್ ಸೆಕ್ಯುರಿಟೀಸ್ ಲಿಮಿಟೆಡ್ ಮೂಲಕ ಐಇಪಿಎಫ್ ಪ್ರಾಧಿಕಾರದಿಂದ ಪರಿವರ್ತನೆ ಮಾಡುವ ಉದ್ದೇಶಕ್ಕಾಗಿ ಸಂಬಂಧಿತ ಶೇರುದಾರರು ಹೊಂದಿರುವ ಮೂಲ ಸರ್ಟಿಫಿಕೇಟ್(ಗಳ) ಬದಲಿಗೆ ಹೊಸ ಶೇರು ಸರ್ಟಿಫಿಕೇಟ್(ಗಳು)ನ್ನು ಕಂಪೆನಿಯು ನೀಡುತ್ತಿದೆ ಎಂಬುದನ್ನು ಶೇರುಗಳನ್ನು ಭೌತಿಕ ರೂಪದಲ್ಲಿ ಹೊಂದಿರುವ ಮತ್ತು ಯಾರ ಶೇರುಗಳು ಐಇಪಿಎಫ್‌ಗೆ ವರ್ಗಾವಣೆಯಾಗಬೇಕಾಗಿದೆಯೋ ಅಂತಹ ಸಂಬಂಧಿತ ಶೇರುದಾರರು ದಯವಿಟ್ಟು ಗಮನಿಸಬೇಕಾಗಿ ವಿನಂತಿ. ಅಂತಹ ಸರ್ಟಿಫಿಕೇಟ್‌ಗಳನ್ನು ನೀಡಿದ ನಂತರ ನಿಮ್ಮ ಹೆಸರಿನಲ್ಲಿ(ಗಳಲ್ಲಿ) ರಿಜಿಸ್ಟರ್ ಆಗಿರುವ ಮೂಲಶೇರು ಸರ್ಟಿಫಿಕೇಟ್(ಗಳು) ತಾನಾಗಿಯೇ ರದ್ದಾಗುತ್ತವೆ ಮತ್ತು ನಾನ್ ನಿಗೋಶಿಯೇಬಲ್ ಎಂದು ಪರಿಗಣಿಸಲ್ಪಡುತ್ತವೆ. ಡಿಮ್ಯಾಟ್ ರೂಪದಲ್ಲಿ ಶೇರುಗಳನ್ನು ಹೊಂದಿರುವಂತಹ ಶೇರುದಾರರ ಪ್ರಕರಣದಲ್ಲಿ ಈ ಕೆಳಗೆ ಸೂಚಿಸಿರುವಂತೆ ಐಇಪಿಎಫ್ ಪ್ರಾಧಿಕಾರದ ಡಿಮ್ಯಾಟ್ ಖಾತೆಗಳಲ್ಲಿ ಶೇರುಗಳ ವರ್ಗಾವಣೆಯನ್ನು ಕಂಪೆನಿ ಆಯಾಯ ಡೆಪೊಸಿಟರಿ ಮೂಲಕ ಕಾರ್ಪೊರೇಟ್ ಕ್ರಮದ ರೀತ್ಯಾ ಜಾರಿಗೊಳಿಸುತ್ತದೆ.

ಅಂತಹ ಶೇರುದಾರರ ಅಪ್‌ಡೇಟ್ ಮಾಡಲಾದ ಪಟ್ಟಿಯ ಸಂಪೂರ್ಣ ವಿವರಗಳನ್ನು ಕಂಪೆನಿಯು ತನ್ನ ವೆಬ್‌ಸೈಟ್‌ನಲ್ಲಿ ಅಪ್‌ಲೋಡ್ ಮಾಡಿದ್ದು ಅವುಗಳನ್ನು ತಿದ್ದುಪಡಿ ಮಾಡಲಾದ ನಿಯಮಗಳಿಗೆ ಅನುಸಾರವಾಗಿ ಐಇಪಿಎಫ್‌ನ ಡಿಮ್ಯಾಟ್ ಖಾತೆಗಳಿಗೆ ಶೇರುಗಳ ವರ್ಗಾವಣೆ ಉದ್ದೇಶಕ್ಕಾಗಿ ಹೊಸಶೇರು ಸರ್ಟಿಫಿಕೇಟ್‌ಗಳ ನೀಡಿಕೆಗೆ ಸಂಬಂಧಿಸಿದ ಸೂಕ್ತ ನೋಟೀಸು ಎಂದು ಪರಿಗಣಿಸಬೇಕೆಂಬುದನ್ನು ಶೇರುದಾರರು ದಯವಿಟ್ಟು ಗಮನಿಸಬಹುದಾಗಿದೆ.

ಅಂತಹ ಶೇರುಗಳ ಮೇಲಿನ ಯಾವುದೇ ಮುಂದಿನ ಡಿವಿಡೆಂಡ್‌ನ್ನು ಐಇಪಿಎಫ್‌ಗೆ ಕ್ರೆಡಿಟ್ ಮಾಡಲಾಗುವುದು. ಐಇಪಿಎಫ್‌ಗೆ ವರ್ಗಾಯಿಸಲಾದ ಕ್ಲೈಮ್ ಮಾಡದ ಡಿವಿಡೆಂಡ್ ಮತ್ತು ಶೇರುಗಳ ಸಂಬಂಧದಲ್ಲಿ ಕಂಪೆನಿ ವಿರುದ್ಧ ಯಾವುದೇ ಕ್ಲೈಮ್ ಇರಲಾರದು. ಐಇಪಿಎಫ್‌ಗೆ ಡಿವಿಡೆಂಡ್ ಮತ್ತು ಶೇರುಗಳನ್ನು ವರ್ಗಾವಣೆ ಮಾಡಿದ ಮೇಲೆ ನಿಯಮಗಳ ಪ್ರಕಾರ ಫಾರ್ಮು ಐಇಪಿಎಫ್-5ರಲ್ಲಿ ಐಇಪಿಎಫ್‌ಗೆ ಅರ್ಜಿಯೊಂದನ್ನು ಸಲ್ಲಿಸುವ ಮೂಲಕ ಶೇರುದಾರರು ಅವುಗಳನ್ನು ಕ್ಲೈಮ್ ಮಾಡಬಹುದಾಗಿದೆ. ಆ ಫಾರ್ಮು ಕಂಪೆನಿಯ ವೆಬ್‌ಸೈಟ್‌ನಲ್ಲಿ ಮತ್ತು ಐಇಪಿಎಫ್‌ನ ವೆಬ್‌ಸೈಟ್ ಆದ www.iepf.gov.in ನಲ್ಲಿ ಲಭ್ಯವಿದೆ.

ಮೇಲಿನ ವಿಷಯದ ಬಗ್ಗೆ ಇನ್ನಷ್ಟು ಸ್ಪಷ್ಟೀಕರಣಕ್ಕಾಗಿ ಸಂಬಂಧಿತ ಶೇರುದಾರರು ಕಂಪೆನಿಯನ್ನು ಅಥವಾ ಅದರ ರಿಜಿಸ್ಟ್ರಾರ್ ಅಂಡ್ ಟ್ರಾನ್ಸ್‌ಫರ್ ಏಜೆಂಟ್ (ಆರ್‌ಟಿಎ)ಯನ್ನು ಸಂಪರ್ಕಿಸಬಹುದು.

ಶ್ನೀಡರ್ ಇಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಡೆಡ್	ರಿಜಿಸ್ಟ್ರಾರ್ ಮತ್ತು ಟ್ರಾನ್ಸ್‌ಫರ್ ಏಜೆಂಟ್
ರಿ. ಕಚೇರಿ : 5ಸಿ/1, ಕೆಐಎಡಿಬಿ ಇಂಡಸ್ಟ್ರಿಯಲ್ ಏರಿಯಾ, ಅತ್ತಿಬೇಲೆ, ಬೆಂಗಳೂರು- 562107, ಕರ್ನಾಟಕ. ಸಿಐಎನ್ : ಯು32109ಕೆಎ1984ಪಿಎಲ್‌ಸಿ079103, ಫೋನ್ : 08067888300, ವೆಬ್‌ಸೈಟ್ : www.schneiderelectricpresident.com, ಇ-ಮೇಲ್: priyanka.aggarwal@schneider-electric.com	ಶ್ರೀ ರವಿ ಉಟೇಕರ್ ಯುನಿವರ್ಸಲ್ ಕ್ಯಾಪಿಟಲ್ ಸೆಕ್ಯುರಿಟೀಸ್ ಪ್ರೈ. ಲಿ. 21 ಶಕ್ತಿ ನಿವಾಸ್, ಮಹಾಕಾಲಿ ಕೇವ್ಸ್ ರೋಡ್, ಅಂಧೇರಿ (ಪೂ.), ಮುಂಬೈ-400093. ದೂ.: (022) 28207203, 26207204, 28207205 ಫ್ಯಾಕ್ಸ್ ನಂ.: +91-22-2820 7207 www.info@unisec.in

ಶ್ನೀಡರ್ ಇಲೆಕ್ಟ್ರಿಕ್ ಪ್ರೆಸಿಡೆಂಟ್ ಸಿಸ್ಟಮ್ಸ್ ಲಿಮಿಡೆಡ್ ಪರವಾಗಿ
ಪ್ರಿಯಾಂಕ ಅಗರ್‌ವಾಲ್
ಕಂಪೆನಿ ಕಾರ್ಯದರ್ಶಿ

ದಿನಾಂಕ : 31-10-2017